(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ರೆಪ್ರಸೆಂಟೇಷನ್ ಮಾಡುವುದನ್ನೂ ಮತ್ತೆ ಆ ಬಗ್ಗೆ ಮಂತ್ರಿಗಳು ಭರವಸೆ ಕೊಡುವುದನ್ನು ಬರೆದು ಕೊಂಡು ಮುಂದೆ ರಿಕಾರ್ಡ್‌ಇಡುವುದು ಉತ್ತಮ ವಲ್ಲವೇ ?

Sri S. NIJALINGAPPA.—It is a suggestion for action.

ಶ್ರೀ ಗೋಪಾಲಸಾಲೆನ್ನ.—(ಎ) ಪ್ರಶ್ನೆಗೆ ಉತ್ತರ ವಾಗಿ "No promise has been made" ಎಂದು ಹೇಳಿದೆ. ಸುಮಾರು 14 ಸಾವಿರ ರೂಪಾಯಿ ಗಳನ್ನು ಒಂದು ಗ್ರಾನುದ ಮುಖಾಂತರ ಈ ಬಾಬಿಗೆ ಸರ್ಕಾರ ಅನೇಕ ವರ್ಷಗಳಹಿಂದೆಯೇ ವಸೂಲು ಮಾಡಿ ವಾಗ್ದಾನ ಮಾಡಿದ್ದಾರೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೆಲವು ಗ್ರಾನುಗಳಲ್ಲಿ ಈ ಬಾರಿಗೆ ವಸೂಲು ಮಾಡಿರುವುದು ನಿಜವೇ ?

ಅಧ್ಯಕ್ಷರು.—ಎಷ್ಟು ವರ್ಷಗಳ ಹಿಂದೆ ?

ಶ್ರೀ ಗೋಪಾಲಸಾಲೆನ್ನ.—ಸುಮಾರು ಮೂರು ವರ್ಷಗಳಾಗಿರಬಹುದು.

ಶ್ರೀ ಗೊಪಾಲಸಾಲೆನ್ನ.—ಸುಮಾರು 14 ಸಾವಿರ ಚಿಲ್ಲರೆ ರೂಪಾಯಿಗಳನ್ನು ಅಲ್ಲಿನ ಜನರು ಸರ್ಕಾರಕ್ಕೆ ಕಟ್ಟಿರಬೇಕಾದರೆ ಹಾಗೆಯೇ ಏನಾದರೂ ಸರ್ಕಾರದವರು ಆಶ್ವಾಸನೆಯನ್ನು ಹೇಳದೆಯೇ ಜನರು ಕಟ್ಟಲಿಲ್ಲ. ಆಂದ ಮೇಲೆ ಈಗ ಸರ್ಕಾರ ಆದನ್ನು ಬರೆದು ಕೊಂಡನಂತರವೂ ಆಶ್ವಾಸನೆಯನ್ನು ಕೊಡಲಿಲ್ಲವೆಂದು ಹೇಳುವುದು ಸರಿಯೇ, ಇದಕ್ಕೇನಾದರೂ ಬಡ್ಡಿಕೊಡುತ್ತೀರಾ, ಅಲ್ಲಿನ ಜನಗಳಿಗೆ ಎಷ್ಟು ಅನ್ಯಾಯವಾಗುತ್ತಿದೆ ಎನ್ನುವ ಪ್ರಶ್ನೆಯನ್ನು ಸರ್ಕಾರದವರು ಹೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ. — ಯಾವುದಾದರೂ ಒಂದು ಪ್ರಶ್ನೆಯನ್ನು ಕೇಳಿದರೆ ಜವಾಬು ಹೇಳುತ್ತೇನೆ.

ಶ್ರೀ ಗೋಪಾಲಸಾಲೆನ್ನ.—ಆಶ್ವಾಶನೆ ಕೊಡಲಿಲ್ಲ ವೆಂದು ಹೇಳುತ್ತೀರಿ. ಆಶ್ವಾಸನೆಯನ್ನೇ ಕೊಡಲ್ಲಿಲ್ಲಿಲ್ಲ ವೆಂದರೆ ಅಲ್ಲಿನ ಜನಗಳು ಯಾವ ಭರವಸೆಯಿಂದ ಈಗ ಹಣವನ್ನು ಕೊಟ್ಟಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಂತ್ರಿಗಳು ಆಶ್ವಾಸನೆ ಕೊಟ್ಟರೂ ಅಷ್ಟೆ ಆ ರೀತಿ ಕೊಡದಿದ್ದರೂ ಆ ಕೆಲಸವನ್ನು ಮಾಡಿಯೇ ತೀರಬೇಕು ಎಂಬುದಾಗಿ ತೀರ್ಮಾನ ಮಾಡಿದೆ. ಎಲ್ಲೆಲ್ಲಿ ಸಾಧ್ಯವೋ ಮತ್ತು ಅವಶ್ಯಕವೋ ಅಲ್ಲಲ್ಲಿ ರೈತರಿಗೆ ವಿದ್ಯುಚ್ಛಕ್ತಿ ಕೊಡಬೇಕು. ಎಲ್ಲಿ ವಿದ್ಯುಚಕ್ತಿ ಸರಬರಾಜು ಕೊಡುತ್ತೇವೆಂದು ಹೇಳಿರುತ್ತಾರೋ ಒಂದುವೇಳೆ ಅಲ್ಲಿ ವಿದ್ಯುಚ್ಛಕ್ತಿಯನ್ನು ಸಪ್ಲೈಮಾಡದೆ ಹೋದರೆ ಮಾನ್ಯ ಸದಸ್ಯರು ಕೆಲಸವೇನೋ ನಡೆಯುತ್ತದೆ ಎಂಬುದಾಗಿ ಗ್ರಹಿಸಬೇಕು. ಆ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಸಂದೇಹವೇ ಇರಬೇಕಾಗಿಲ್ಲ.

ಶ್ರೀ ಗೋಪಾಲಸಾಲೆನ್ನ.—ಈ ವಿದ್ಯುಚ್ಛಕ್ತಿಯನ್ನು ಒದಗಿಸುವಂತಹ ಯೋಜನೆ ಸದ್ಯದಲ್ಲಿ ಸರ್ಕಾರಕ್ಕೆ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲವೆಂಬುದಾಗಿ ಹೇಳಿದ್ದರೆ ಜನಗಳು ಕಟ್ಟಿರತಕ್ಕ ಹಣವನ್ನು ವಾಪಸ್ಸು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಯೋಜನೆಯನ್ನು ಅವರಿಗೆ ಕೊಟ್ಟೇತೀರಬೇಕು ಎಂಬುದಾಗಿ ಸರ್ಕಾರದಲ್ಲಿ ನಿರ್ಧಾರವಾಗಿರುವಾಗ ಜನಗಳು ಕಟ್ಟಿದ ಹಣವನ್ನು ವಾಪಸ್ಸು ಕೊಡುವುದು ಎಲ್ಲಿ ಬರುತ್ತದೆ ?

Sri. S. S. KOLKE BAIL.—May I Know from the Government, how many months or years it may take to give power to a place ?

Sri S. NIJALINGAPPA.—Possibly, it will take a few months.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ವಿದ್ಯುಚ್ಛಕ್ತಿ ಇಲಾಖೆಯ ಲೈನ್‌ಮೆನ್‌ಗಳು, ಸೂಪರ್‌ವೈಜರುಗಳಿಗೆ ಕ್ವಾರ್ಟರುಗಳನ್ನು ಕಟ್ಟುವ ವಿಷಯದಲ್ಲಿ ಸರ್ಕಾರದವರು ಹೆಚ್ಚಿಗೆ ಗಮನ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಗಮನ ಕೊಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ನೀರಾವರಿ ಉದ್ದೇಶ ಕ್ಕೋಸ್ಕರ ರೈತರು ಅರ್ಜಿಹಾಕಿ ಹಣವನ್ನು ಡಿಪಾಜಿಟ್ ಮಾಡಿದ ಮೇಲೆ ಎಷ್ಟು ದಿವಸಗಳಲ್ಲಿ ಅವರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂದು ಸರ್ಕಾರದವರು ನೀತಿಯನ್ನು ಇಟ್ಟುಕೊಂಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಹೇಳುವುದಕ್ಕಾಗುದಿಲ್ಲ. ಕೆಲವು ಸಮಯಗಳಲ್ಲಿ ನಾವೇ ಅವರು ಕೇಳುವುದಕ್ಕಿಂತ ಮುಂಚಿತವಾಗಿಯೇ ಕೊಟ್ಟಿರುತ್ತೇವೆ. ಕೆಲವು ಸಾರಿ ಆಶ್ವಾಸನಗಳನ್ನೂ ಸಹ ಮಾಡಿರುತ್ತೇವೆ. ಆದರೆ ಕಾಲ ನಿಗದಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀರಾವರಿ ಪಂಪು ಸೆಟ್‌ಗಳಿಗೇನೋ ಅಲ್ಲಿನ ಜನಗಳು ಹಣಕೊಟ್ಟಿದ್ದಾರೆ. ಈಗ ವಿದ್ಯುಚ್ಛಕ್ತಿ ಮೇಲೆ ಬೆಲೆ ಜಾಸ್ತಿ ಮಾಡಿದ್ದಾರೆ. ಆ ರೀತಿ ಬೆಲೆ ಜಾಸ್ತಿಯಾಗಿರುವುದರಿಂದ ಈ ಆ ಸೆಟ್ಟುಗಳು ಬೇಡವೆಂದೇನಾದರೂ ರೆಪ್ರಸೆಂಟೇಷನ್ಸ್ ಬಂದಿವೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

Transfer of Husband and wife working as Class III or Class IV Officials in Government Services to Separate Places in the State.

*Q.—266 Sri J. NARAYANAPPA (Mulbagal).—

Will the Government be pleased to state :—

(*a*) whether they are aware that husband and wife working as Class III or Class IV Officials in

government services are being transferred to separate places in the State :

(*b*) if so, the action taken by them to retain them in one place and also to issue suitable instructions to stop such transfer in future ?

A.—Sri S. NIJALINGAPPA (Chief Minister).—

(*a*) No.

(*b*) Does not arise.

ಶ್ರೀ ಜೆ. ನಾರಾಯಣಪ್ಪ.—3 ಮತ್ತು 4ನೇ ವರ್ಗದ ನೌಕರರು ಆಗಿ ಗಂಡ ಮತ್ತು ಹೆಂಡತಿ ಇಬ್ಬರೂ ಸರ್ಕಾರದ ಸೇವೆಯಲ್ಲಿರುತ್ತಾರೆ. ಅವರಿಗೆ ಒಂದೇ ಜಾಗದಲ್ಲಿ ಸ್ಥಳವಿದ್ದರೂ 10—12—20 ಮೈಲಿಗಳ ದೂರ ಒಬ್ಬೊಬ್ಬರನ್ನು ಹಾಕುವುದರಿಂದ ಅವರಿಗೆ ಬಹಳ ಕಷ್ಟವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅಭಿಪ್ರಾಯದ ಮೂತು. ಆ ರೀತಿ ಮಾಡಿದರೆ ಅವರಿಗೆ ತೊಂದರೆಯಾಗುತ್ತದೆ ಎಂಬುದು ಗೊತ್ತು.

ಶ್ರೀ ಜೆ. ನಾರಾಯಣಗೌಡ.—ತೊಂದರೆಯಾಗುತ್ತೆ ಎಂಬುದು ಸರ್ಕಾರಕ್ಕೆ ಗೊತ್ತಿದ್ದರೂ, ಏನಾದರೂ ತೊಂದರೆಯಾಗಿದೆ ಎಂಬುದಾಗಿ ಅರ್ಜಿಗಳು ಸರ್ಕಾರಕ್ಕೆ ಬಂದಾಗ ಅವನ್ನು ವಿಲೇವಾರಿ ಮಾಡದೆ ಬಹಳ ನಿಧಾನವಾಗುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದ್ದರಿಂದ ಇನ್ನು ಮುಂದೆ ಆಯಾ ಸ್ಥಳಗಳಲ್ಲಿ ಖಾಲಿ ಸ್ಥಾನಗಳು ಇದ್ದರೆ ಆಲ್ಲಲ್ಲಿಯೇ ಅವರನ್ನು ಖಾಯಂ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಒಂದು ಪ್ರಶ್ನೆ. ಗಂಡ ಮತ್ತು ಹೆಂಡತಿ ಇಬ್ಬರೂ ಸರ್ಕಾರೀ ನೌಕರಿಯಲ್ಲಿದ್ದರೆ ಆ ಕೆಲಸ ಮಾಡಬಹುದು. ಅಂತ ಹವರಿಗೆ ಸಾಧ್ಯವಾದಷ್ಟು ಮಟ್ಟಿಗೆ ಸಹಾಯ ಮಾಡುತ್ತೇವೆ. ಅಂತಹ ವಿಷಯಗಳೇನಾದರೂ ಇದ್ದರೆ, ಮೂನ್ಯ ಸದಸ್ಯರು ಅವನ್ನು ನನ್ನ ಗಮನಕ್ಕೆ ತಂದರೆ ಅದನ್ನು ಕೂಡಲೇ ಸರಿಪಡಿಸುತ್ತೇನೆ.

Sri GANJI VEERAPPA.— Is there any circular issued by the Government that if both husband and wife are in Government service, as far as possible, they must be kept in the same place ?

Sri S. NIJALINGAPPA.—There is a circular that as far as possible they should be posted to the same place.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮೂನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಡಿಸಿದ ಹಾಗೆ ನಿಜವಾಗಿ ಸರ್ಕಾರದ ನಿಲುವು ಆ ರೀತಿ ಇದ್ದರೆ, 3ನೇ ಮತ್ತು 4ನೇ ವರ್ಗದ ನೌಕರರನ್ನು ಸಾಧ್ಯವಾದ ಮಟ್ಟಿಗೆ ಒಂದೇ ಕಡೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ನಿಜಲಿಂಗಪ್ಪ.—ಆ ರೀತಿ ಎಲ್ಲರಿಗೂ ಆಗಿದೆ ಎಂದು ನಾನು ಒಪ್ಪಲಿಲ್ಲ. ಇನ್ನು ಮುಂದೆ ಆ ರೀತಿಯಾಗತಕ್ಕ ಪ್ರಶ್ನೆ ಏಳುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ರೀತಿ ಎಷ್ಟೋ ಇವೆ. ತೋರಿಸೋಣ.

ಶ್ರೀ ಎಸ್. ನಿಜಲಿಂಗಪ್ಪ.—ತೋರಿಸಿ.

ಶ್ರೀ ಗೋಪಾಲ ಸಾಲೆನ್ನ.— ದಕ್ಷಿಣ ಕನ್ನಡ ಜಿಲ್ಲೆಯ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮೂಲಕ ನೇಮಕರಾದ ಹರಿಜನ ಅಧ್ಯಾಪಕರಲ್ಲಿ ಗಂಡ ಮಂಗಳೂರಿನಲ್ಲಿದ್ದರೆ ಹೆಂಡತಿ ಕುಂದಾಪುರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂಥಾ ನಿದರ್ಶನಗಳು ಬೇಕಾದಷ್ಟಿವೆ. ಆಂಥವರಿಗೆ ಸ್ವಲ್ಪ ಅನುಕೂಲವಾದ ಸ್ಥಳಗಳನ್ನು ಒದಗಿಸುವ ಕಡೆಗೆ ಹೆಚ್ಚಿಗೆ ಗಮನವನ್ನು ಕೊಡುವುದು ಅಗತ್ಯವಲ್ಲವೇ ?

MR. SPEAKER.—(Addressing Sri Gopal Salenna) Please give individual instances and do not mention it generally. If there is any instance, mention it. Have you got any single instance in your mind ? Please put it on a point of paper and pass it on to the Chief Minister and he will take action.

MR. SPEAKER.—Q. No. 273. The Hon'ble Member is not in his seat. Next question Number 302.

Sri GANGADHAR NAMOSHI.—Sir, since the statement of assets and liabilities has been placed on the Table of the House just now and as I have to go through all the details, I request that this question may be taken up to-morrow.

MR. SPEAKER.—What is it that you know ? Do you want to know everything ? How is it going to improve matters ? What is it that is lacking to-day for good performance ? I will pass it over for a minute and you can study the details.

Sri GANGADHAR NAMOSHI.—Sir, the statement of assets and liabilities was placed on the Table just a few minutes back. I request that this question may be taken up tomorrow to enable me to study the details.

MR. SPEAKER.— The statement placed on the Table of the House could be seen by you after you came here. There is still half an hour. You can look into it.

Starting of a High School in the Mining area of Bagur Hobli.

*Q.—49. Sri H. R. KESHAVA MURTHY(Gandasi).—

Will the Government be pleased to state:—

(*a*) whether it is a fact that the people of Bagur Hobli represented to the Government for the sanction of a High School in the Mining area of Bagur Hobli;

(*b*) whether it is a fact that they had deposited Rs. 10,500 with the Taluk Board in this behalf;

(*c*) whether it is a fact that a school was sanctioned to Shravanabelgola where the people had deposited money recently and the same was opened by the Educational Minister on 14th August 1962;

(*d*) whether it is a fact that though recommendation for the sanction of both the High Schools came simultaneously by the Deputy Director ot Public Instruction, why sanction was accorded to Shravanabelagola alone?

A.—Sri S. R. KANTHI (Minister for Education).—

(*a*) Yes.

(*b*) Yes.

(*c*) Yes.

(*d*) Recommendation were not made simultaneously.

Sri H. R. KESHAVAMURTHY.—Can you kindly give me the date of the recommendation of the D.D.P.I. for high school?

† Sri S. R. KANTHI.—Yes. For Sravanabelagola, it was re-commended on 23-7-1962, and for Bagur hobli, it was on 4-8-62.

Sri H. R. KESHAVAMURTHY.—Are you aware that it is a very big hobli in Channarayapatna Taluk with a population of over thirty thousand, and there is no high school in that hobli?

Sri S. R. KANTHI.—I am aware.

Sri H. S. KESHAVAMURTHY.—Though late, can the Government accord sanction for this high school?

Sri S. R. KANTHI.—I have told in other cases that such questions will be considered next year sympathetically.

Sri H. R. KESHAVAMURTHY.—To this area particulary?

Sri S. R. KANTHI.—This year, it is too late.

Sri H. R. KESHAVAMURTHY.—For the mining area, we have deposited Rs. 10, 5000. Will you givepermission soon?

Sri S. R. KANTHI.—It will be considered sympathetically next year.

ಶ್ರೀ ಬಿ. ಹುಚ್ಚೇಗೌಡ.—ಈ ಸ್ಕೂಲನ್ನು ಕೊಡುವ ವಿಚಾರದಲ್ಲಿ ಮೊದಲು ಯಾವ ಆಪ್ಲಿಕೇಷನ್ ಶಿಫಾರ್ಸಾಗಿ ಬರುತ್ತೋ ಅಂಥ ಆಪ್ಲಿಕೇಷನ್‌ಗೆ ಪುರಸ್ಕಾರ ಕೊಡತಕ್ಕದ್ದು ಪ್ರಯಾರ್ಟಿ ಕೊಡತಕ್ಕದ್ದು ಸರಿ ಎಂಬುದೋ ತಮ್ಮ ಅಭಿಪ್ರಾಯ?

ಶ್ರೀ ಎಸ್. ಆರ್. ಕಂಠಿ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಮೊದಲು ತಮ್ಮ ಕಡೆಗೆ ಶಿಫಾರ್ಸಾಗಿ ಬಂದ ಮೊದಲನೆ ಅರ್ಜಿಗೂ ಮತ್ತು ಎರಡನೇ ಶಿಫಾರ್ಸ್ ಅರ್ಜಿಗೂ ಕೇವಲ 16 ದಿವಸಗಳ ವ್ಯತ್ಯಾಸವಿದೆ. ಈ ವ್ಯತ್ಯಾಸದಿಂದಲೇ ಅಲ್ಲಿಗೆ ಸ್ಕೂಲನ್ನು ಕೊಡುವುದು ತಪ್ಪಿಹೋಯಿತೆಂದು ಹೇಳುತ್ತಿರಾ?

ಶ್ರೀ ಎಸ್. ಆರ್. ಕಂಠಿ.—ತಪ್ಪಿಸಿಲ್ಲ. ಮುಂದಿನ ವರ್ಷಸಹಾನುಭೂತಿಯಿಂದ ಪರಿಶೀಲಿಸಲಾಗುತ್ತೆಂದು ಹೇಳಿದೆ.

†Indicates that the remarks or speeches have not been revised by the Member concerned.